

# ಸುಂದರ ದೃಶ್ಯ ಕಾವ್ಯ








ಪಾಪ್ ಗಾಯಕಿ ಜೆನಿಫರ್ ಲೊಪೆಜ್, ಗಾಯಕ ಪಿಟ್‌ಬುಲ್ ಹಾಗೂ ಬ್ರೆಜಿಲ್ ಗಾಯಕಿ ಕ್ಲಾಡಿಯಾ ಲೆಟ್ಟೆ

ಫುಟ್‌ಬಾಲ್ ಎಂದರೆ ಬ್ರೆಜಿಲ್; ಬ್ರೆಜಿಲ್ ಎಂದರೆ ಫುಟ್‌ಬಾಲ್. ಇಲ್ಲಿ ಫುಟ್‌ಬಾಲ್ ಇಲ್ಲದ ಮನೆಗಳಿಲ್ಲ. ಫುಟ್‌ಬಾಲ್ ಪ್ರೀತಿ ಇಲ್ಲದ ಮನಗಳಿಲ್ಲ. ಈ ಸುಂದರ ಆಟ ಅವರ ಉಸಿರು, ಅವರ ಧರ್ಮ, ಅವರ ಬದುಕು.

ಸಾಂಬಾ ನಾಡಿನ ಈ ಫುಟ್‌ಬಾಲ್ ಪ್ರೀತಿ ಅನಾವರಣಗೊಂಡಿದ್ದು ಫಿಫಾ ವಿಶ್ವಕಪ್ ಉದ್ಘಾಟನಾ ಸಮಾರಂಭದಲ್ಲಿ. ಸಾವೊ ಪಾಲೊದಲ್ಲಿ ನಡೆದ ಈ ಸಮಾರಂಭ ಲಕ್ಷಾಂತರ ಮನಗಳಿಗೆ ಕಚಗುಳಿ ಇಟ್ಟಿತು. ಅದೊಂದು ಅಕ್ಷರಶಃ ಬಣ್ಣದ ಲೋಕ, ಸುಂದರ ದೃಶ್ಯ ಕಾವ್ಯ. ಅದಕ್ಕೆ ಸಂಗೀತ, ನೃತ್ಯ ಹಾಗೂ ಕಲೆಯ ಸಾಥ್. ಫುಟ್‌ಬಾಲ್ ಪ್ರೀತಿ ಹೆಚ್ಚಿಸಲು ಇನ್ನೇನು ಬೇಕು? ಇದರ ನಡುವೆ ಮೊಳಗಿದ್ದು 'ಆಲ್ ಇನ್ ಒನ್ ರಿದಂ...'.

600ಕ್ಕೂ ಅಧಿಕ ಕಲಾವಿದರು ಆತಿಥೇಯ ನಾಡಿನ ಜಾನಪದ ನೃತ್ಯಗಳ ಮೂಲಕ ಪುರಾತನ ಹಾಗೂ ಆಧುನಿಕ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲಿದರು. ಒಂದೆಡೆ ಬುಡಕಟ್ಟಿನ ಸಂಸ್ಕೃತಿ ಅನಾವರಣಗೊಂಡರೆ ಇನ್ನೊಂದೆಡೆ ಆಧುನಿಕ ಪಾಪ್ ಸಂಗೀತದ ರಸದೌತಣ. ಕಲಾವಿದರು ಹೂವಾಗಿ ಅರಳಿ ನಿಂತು ಸುವಾಸನೆ ಬೀರಿದರೆ, ನೋಡುಗರ ಮನಸ್ಸು ಹಾಗೇ ಸುಮ್ಮನೇ ಮುದಗೊಂಡಿತು. ಜೊತೆಗೆ ಎಲ್ಲರ ಕಾತರದ ಹಾಗೂ ಬಹು ನಿರೀಕ್ಷೆಯ ಫುಟ್‌ಬಾಲ್ ಆಟದ ಸೊಬಗಿತ್ತು.

ಅಂಗಳದ ನಡುವೆ ಇದ್ದ ದೈತ್ಯ ಚೆಂಡಿನಲ್ಲಿ 90 ಸಾವಿರ ಎಲ್‌ಇಡಿ ಬಲ್ಬ್‌ಗಳನ್ನು ಬಳಸಿ ಮೆರುಗು ನೀಡಲಾಯಿತು. ಕೊನೆಯಲ್ಲಿ ಚೆಂಡು ಎಳೆಎಳೆಯಾಗಿ ಹೂವಿನಂತೆ ಬಿಡಿಸಿಕೊಂಡಿತು. ಅದರೊಳಗಡೆಯಿಂದ ಬಂದ ಅಮೆರಿಕದ ಖ್ಯಾತ ಪಾಪ್ ಗಾಯಕಿ ಜೆನಿಫರ್ ಲೊಪೆಜ್, ಗಾಯಕ ಪಿಟ್‌ಬುಲ್ ಹಾಗೂ ಬ್ರೆಜಿಲ್ ಗಾಯಕಿ ಕ್ಲಾಡಿಯಾ ಲೆಟ್ಟೆ 'ನಾವೆಲ್ಲರೂ ಒಂದೇ...' ಎಂದು ಹಾಡಿದರು.

ಕ್ರೀಡಾಂಗಣದಲ್ಲಿದ್ದು ವೀಕ್ಷಿಸಿದ 70 ಸಾವಿರ ಮಂದಿಯ ಕಂಗಳಲ್ಲಿ ರೋಮಾಂಚನ. ಟಿ.ವಿ ಮೂಲಕ ವೀಕ್ಷಿಸಿದ ಸುಮಾರು 200 ಕೋಟಿ ಮಂದಿಯ ಮನತುಂಬಾ ಪುಳಕ.

■ ಕೆ. ಓಂಕಾರ ಮೂರ್ತಿ